821 (87) ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು): ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕೂಲಿಗಾಗಿ ಕಾಳು ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಕಳೆದ ಮೂರು ವರ್ಷಗಳಲ್ಲಿ ಬಂದಿರುವ ಕಾಳು ಎಷ್ಟು ಹಾಗೂ ಜಿಲ್ಲಾವಾರು ಜಿಲ್ಲೆಗಳಿಗೆ ಕೊಡಮಾಡಿದ ಹಾಗೂ ಹಂಚಿದ ಕಾಳು ಎಷ್ಟೆಷ್ಟು;

ಆ) ಕೇಂದ್ರದಿಂದ ಬಂದ ಈ ಕಾಳಿನಲ್ಲಿ ಆಯಾ ಜಿಲ್ಲೆಗಳಿಂದ ತಾಲ್ಲೂಕುವಾರು ಕೊಟ್ಟಿರುವ ಕಾಳು ಎಷ್ಟೆಷ್ಟು;

ಇ) ರಾಜ್ಯದಲ್ಲಿನ ತಾಲ್ಲೂಕುವಾರು ಯಾವಾವ ಏಜೆನ್ಸಿಗಳಿಗೆ ಈ ಕಾಳನ್ನು ಹಂಚಲಾಗಿದೆ;

ಈ) ಕೂಲಿಗಾಗಿ ಕಾಳು ಯೋಜನೆಯಲ್ಲಿ ಬಂದ ಕಾಳು ಎಷ್ಟೆಷ್ಟು ದುರುಪಯೋಗವಾಗಿದೆ ಹಾಗೂ ಈ ದುರುಪಯೋಗದಲ್ಲಿ ಸಿಕ್ಕಿ ಬಿದ್ದಿರುವ ಪ್ರಕರಣ ಹಾಗೂ ವ್ಯಕ್ತಿಗಳು ಯಾರ್ಯಾರು;

ಉ) ಈ ಕಾಳು ಪರದೇಶಕ್ಕೆ ಎಷ್ಟು ಹೋಗಿದೆ ಹಾಗೂ ಹೋಗಲು ತಯಾರಾಗಿದ್ದ ಕಾಳು ಹಾಗೂ ಕಾಳಿನ ಮೊತ್ತ ಎಷ್ಟು ಹಾಗೂ ಎಲ್ಲೆಲ್ಲಿ?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) :

ಅ) ಕೇಂದ್ರ ಸರ್ಕಾರದಿಂದ ಕಳೆದ ಮೂರು ವರ್ಷಗಳಲ್ಲಿ SGRY(SC) ಬರ ಕಾಮಗಾರಿಗಾಗಿ ಈ ಕೆಳಗಿನಂತೆ ಆಹಾರಧಾನ್ಯ ಬಂದಿರುತ್ತದೆ.

ವರ್ಷ	ಬಿಡುಗಡೆ ಮಾಡಿರುವ ಆಹಾರಧಾನ್ಯ (ಲಕ್ಷ ಮೆ. ಟನ್)
2001–02	1.00
2002–03	5.30
2003–04	6.79750
ಒಟ್ಟು	**13.09750**

ಜಿಲ್ಲಾವಾರು ವಿವರಗಳು ಅನುಬಂಧ–1ರಲ್ಲಿ ಲಗತ್ತಿಸಲಾಗಿದೆ.

ಆ) ತಾಲ್ಲೂಕುವಾರು ಬಿಡುಗಡೆ ಮಾಡಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ರಾಜ್ಯದಲ್ಲಿ 1,74,401 ಕ್ವಿಂ. ಅಕ್ಕಿ ಮತ್ತು 417.45 ಕ್ವಿಂ. ಗೋಧಿಯನ್ನು ಜಪ್ತಿ ಮಾಡಲಾಗಿದೆ. ಒಟ್ಟು 59 ಪೊಲೀಸು ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ, ಸರ್ಕಾರಿ ನೌಕರರು ಹಾಗೂ ಅಕ್ಕಿ ಗಿರಣಿಯ ಮಾಲೀಕರುಗಳು ಒಳಗೊಂಡಿರುತ್ತಾರೆ.

ಉ) 15,000 ಮೆ.ಟನ್ ಆಹಾರಧಾನ್ಯ ಪರದೇಶಕ್ಕೆ ಹೋಗಿರುತ್ತದೆ. ಮಂಗಳೂರಿನಿಂದ ಹೋಗಲು ತಯಾರಾಗಿದ್ದ ಆಹಾರಧಾನ್ಯಗಳು 17,000 ಮೆ.ಟನ್ ಇದ್ದು ಒಟ್ಟು ರೂ.20.00 ಕೋಟಿ ಮೌಲ್ಯವುಳ್ಳದ್ದಾಗಿರುತ್ತದೆ.

Annexure-1

Allotment of foodgrains (Released) during 2001-02, 2002-03 & 2003-04

Sl.No.	District	2001-02	2002-03	2003-04
1	2	3	4	5
1	Bangalore (U)	3380	6420.00	13545.00
2	Bangalore (R)	4880	24390.00	25590.00
3	Belgaum	2040	28700.00	50261.00
4	Bellary	8800	31910.00	32735.00
5	Bidar	5190	12380.00	13098.00
6	Bijapur	7000	15800.00	22313.00
7	Bagalkot	5250	15880.00	30972.00
8	Chamarajnagar	1970	14930.00	17583.00
9	Chitradurga	4900	21980.00	27622.00
10	Chickmagalur	1210	15850.00	28404.00
11	Dharwad	3130	14300.00	26303.00
12	Davanagere	4910	29480.00	27112.00
13	Gulbarga	8830	39550.00	47426.00
14	Gadag	3580	18700.00	28543.00
15	Hassan	1200	34390.00	33225.00
16	Haveri	1280	20560.00	31450.00
17	Kolar	7900	31730.00	38076.00
18	Koppal	3000	21580.00	21448.00
19	Mandya	880	20429.00	25836.00
20	Mysore	5360	20960.00	23435.00
21	Raichur	5570	20130.00	17598.00
22	Shimoga	1620	24860.00	29455.00
23	Tumkur	6620	33801.00	41467.00
24	U. Kannada	890	9380.00	17680.00
25	Kodagu	610	1910.00	8573.00
	TOTAL	**100000**	**530000.00**	**679750.00**